

ಡಾ.ವಿನೋದ ಛೆಬ್ಬಿ

ದಾಂಪತ್ಯದಲ್ಲಿ ಕಾಮಾಪೇಕ್ಷೆ ಎನ್ನುವುದು ನಿಮ್ಮಲ್ಲಿ ಅಥವಾ ಸಂಗಾತಿಯಲ್ಲಿ ಹುಟ್ಟದೆ ಇಬ್ಬರ ನಡುವೆ ಹುಟ್ಟುತ್ತದೆ.

# 181:ಕಾಮಬಾಂಧವ್ಯ ಸಹಜವೆ?

ಲೈಂಗಿಕ ಬದುಕಿಗೆ ಹೊಸಜೀವ ತುಂಬುವುದರ ಬಗೆಗೆ ಕೆಲವು ವಾರ ಸಾಕಷ್ಟು ಚರ್ಚೆ ನಡೆಸಿದೆವು. ಈ ಸಲ ಲೈಂಗಿಕ ಸಂಬಂಧಗಳಿಗೆ ಅಗತ್ಯವಾದ ಇನ್ನೊಂದು ಪರಿಕಲ್ಪನೆಯನ್ನು ನಿಮ್ಮ ಮುಂದಿಡುತ್ತಿದ್ದೇನೆ.

ನೀವು ಮದುವೆಯಾಗಿದ್ದು (ಅಥವಾ ಬದ್ಧಸಂಬಂಧವನ್ನು ಹೊಂದಿದ್ದು), ನಿಮಗಾಗಲೀ ಸಂಗಾತಿಗಾಗಲೀ ಕಾಮಾಪೇಕ್ಷೆ ಕಡಿಮೆಯಿದೆ ಎನ್ನಿಸುತ್ತಿದೆಯೆ? ಹೌದಾದರೆ, ಇದೇನೂ ಆಶ್ಚರ್ಯವಲ್ಲ. ನಿಮಗೆ ಮಾತ್ರವಲ್ಲ, ಜಗತ್ತಿನ ಎಲ್ಲೆಡೆಗಳಲ್ಲೂ ಎಲ್ಲ ಕಾಲದಲ್‌ಲೂ ಕಾಮಾಪೇಕ್ಷೆಯು ಏರುಪೇರಾಗಿರುವ ದಾಂಪತ್ಯಗಳು ಕಂಡುಬರುತ್ತವೆ. ಹಾಗಾಗಿ ಕಾಮಾಪೇಕ್ಷೆಯ ಒಳಗು ಹೊರಗುಗಳನ್ನು ಅರ್ಥಮಾಡಿಕೊಳ್ಳೋಣ. ಅದಕ್ಕೊಂದು ದೃಷ್ಟಾಂತ:

ವಿಕ್ರಮ– ವಿಜಯಾ (ನಿಜವಾದ ಹೆಸರುಗಳಲ್ಲ) ದಂಪತಿ. ವಿಕ್ರಮನಿಗೆ ಕಾಮಾಸಕ್ತಿ ಹೇರಳವಾಗಿದೆ. ಅದನ್ನು ತೀರಿಸಿಕೊಳ್ಳಲು ವಿಜಯಾಳ ಸಂಗ ಬಯಸುತ್ತಾನೆ. ಆದರೆ ಅವನು ಕೇಳಿದಾಗಲೆಲ್ಲ ವಿಜಯಾ ಒಪ್ಪದೆ ನಿರಾಕರಿಸುತ್ತಾಳೆ. ಅದೊಂದನ್ನು ಬಿಟ್ಟು ನಮ್ಮ ಸಂಬಂಧದಲ್ಲಿ ಏನೂ ಇಲ್ಲವೆ ಎಂದು ಪ್ರಶ್ನಿಸುತ್ತಾಳೆ. ಆಕೆ ಬಯಸಿದಾಗ ಮಾತ್ರ (ಅದು ವಿರಳ) ಅವರಲ್ಲಿ ಕಾಮಕೂಟ ನಡೆಯುತ್ತದೆ – ಆದರೆ ಅವನಿಗೆ ಬೇಕಾದಾಗಲೆಲ್ಲ ಅಲ್ಲ! ಹಾಗಾಗಿ ಕೂಟವನ್ನು ನಿರಾಕರಿಸುವುದರ ಮೂಲಕ ವಿಜಯಾ ತನ್ನನ್ನು ಹಿಡಿತದಲ್ಲಿ ಇಟ್ಟುಕೊಂಡು ಪ್ರಾಬಲ್ಯ ಸಾಧಿಸುತ್ತಿದ್ದಾಳೆಂದು ವಿಕ್ರಮನಿಗೆ ಎನ್ನಿಸುತ್ತದೆ. ಪ್ರಾಬಲ್ಯ ಇದರಲ್ಲಿ ಮಾತ್ರವಲ್ಲ, ಎಲ್ಲದರಲ್ಲೂ ಹೀಗೆಯೇ ಮಾಡುತ್ತಾಳೆ ಎಂದು ಆತನ ತಕರಾರು.

ಆದರೆ ವಿಜಯಾ, ವಿಕ್ರಮನ ಅನಿಸಿಕೆಯನ್ನು ಅಲ್ಲಗಳೆಯುತ್ತಾಳೆ. ಒಂದು ವೇಳೆ ಪ್ರತಿಯೊಂದೂ ಅವಳ ಪ್ರಕಾರ ನಡೆಯುತ್ತಿದ್ದರೆ ಅವಳಿಗೇಕೆ ಯಾವಾಗಲೂ ಒತ್ತಡ ಅನ್ನಿಸಬೇಕು? ವಿಕ್ರಮ ತಾನು ಗಂಡಸು, ಎಲ್ಲ ಗಂಡಸರೂ ಬಯಸುವಂತೆ ಕೂಟ ಬಯಸುತ್ತೇನೆ ಎನ್ನುತ್ತಾನೆ. ಆದರೆ ಅವನಿಗೆ ಕಾಮಸುಖ ತನ್ನಿಂದ ಬೇಕು ವಿನಾ ತಾನು ಬೇಕಿಲ್ಲ! ಹೀಗಾಗಿ ಅವನ ಹಕ್ಕುಸಾಧನೆ ಅವಳಿಗೆ ಇಷ್ಟವಿಲ್ಲ. ಪರಿಣಾಮ? ವಿಕ್ರಮನಿಗೆ ಅತೀವ ನಿರಾಸೆಯಾಗಿ ಮನಸ್ಸು ಮುರಿದುಹೋಗಿದ್ದರೆ, ವಿಜಯಾಳಿಗೆ ಈ ಪರದಾಟ ರೋಸಿಹೋಗಿದೆ. ಅವಳು ವಿರಕ್ತಳೆಂದು ಅವನು ಹೆಸರಿಟ್ಟರೆ, ಅವನಿಗೆ ಕಾಮದ ಹುಚ್ಚೆಂದು ಅವಳು ಆರೋಪಿಸುತ್ತಿದ್ದಾಳೆ. ಒಬ್ಬರು ಇನ್ನೊಬ್ಬರನ್ನು ದೋಷಿಯನ್ನಾಗಿ ಮಾಡಿ ಕಟಕಟೆಯಲ್ಲಿ ನಿಲ್ಲಿಸಿ, ಸಂಗಾತಿಗೆ ಬುದ್ಧಿಹೇಳಿಸಲು ನನ್ನಲ್ಲಿ ಕರೆತಂದಿದ್ದಾರೆ. ಅಷ್ಟಲ್ಲದೆ ಇಬ್ಬರಲ್ಲೂ ನನ್ನ ಬಗೆಗೆ ಒಳಗೊಳಗೆ ಸಂದೇಹವಿದೆ. ನಾನು ಗಂಡಸಾಗಿ ಆಕೆಯಲ್ಲಿ ತಪ್ಪು ಹುಡುಕಬಹುದು ಎಂಬ ಭಯ ವಿಜಯಾಳಿಗೆ ಇದ್ದರೆ (ಯಾಕೆ? ಮುಂಚೆ ಲೈಂಗಿಕ ಚಿಕಿತ್ಸಕರೊಬ್ಬರು 'ನೀವು ಹೆಂಗಸಲ್ಲವೆ, ಸಹಕರಿಸಿ ನೋಡಿ: ನಂತರ ನಿಮಗೂ ಮೂಡ್ ಬರುತ್ತದೆ' ಎಂದು, ಕೆಲವು ಸ್ಪರ್ಶಕಾರ್ಯಗಳನ್ನು ಹೇಳಿಕೊಟ್ಟಿದ್ದಾರೆ. ಅದರಲ್ಲಿ ಆಕೆಗೆ ಮನಸ್ಸೇ ಬರಲಿಲ್ಲ), ನಾನೆಲ್ಲಿ ಕಾಮವನ್ನು ಪರಿತ್ಯಾಗ ಮಾಡಲು ಅಪ್ಪಣೆ ಕೊಡುವೆನೋ ಎಂದು ವಿಕ್ರಮನಿಗೆ ಭಯವಿದೆ ('ಕಾಮವೆಂಬುದು ಬೆಂಕಿಯಿದ್ದಂತೆ – ತುಪ್ಪ ಹೊಯ್ದಷ್ಟೂ ಬೆಂಕಿ ಭುಗಿಲೇಳುತ್ತದೆ' ಎಂದು ಹಿರಿಯರೊಬ್ಬರು ಅವನಿಗೆ ಉಪದೇಶಿಸಿದ್ದಾರೆ).

ಹಾಗಾದರೆ ಇಬ್ಬರ ಪೈಕಿ ಯಾರಲ್ಲಿ ದೋಷವಿದೆ? ಇದಕ್ಕೂ ಶರೀರಶಾಸ್ತ್ರಕ್ಕೂ ಸಂಬಂಧವಿದೆಯೆ? ಅದಕ್ಕಿಂತ ಮುಖ್ಯವಾಗಿ, ಬಾಂಧವ್ಯದಲ್ಲಿ ಕಾಮಾಪೇಕ್ಷೆಯು **(sexual desire)** ಸಹಜವಾಗಿ ಬರುವಂಥದ್ದೆ? ನೋಡೋಣ.

ಹಸಿ ಕಾಮಾಸಕ್ತಿಯು **(libido)** ಹುಟ್ಟುಪ್ರವೃತ್ತಿಯಾಗಿದ್ದು ಸಹಜವಾಗಿದೆ. ಇದು ಶರೀರದಲ್ಲಿ ಹಾರ್ಮೋನ್ ಮುಂತಾದ ರಾಸಾಯನಿಕ ಸ್ರಾವಗಳಿಂದ ಜಾಗ್ರತವಾಗುತ್ತದೆ. ಆಗ ಹಸಿಕಾಮ ಕೆರಳುತ್ತದೆ. ಕಾಮತೃಪ್ತಿಗಾಗಿ ಸಂಗಾತಿಯನ್ನು ಬಯಸುವುದು ಸಹಜ. ಅದಕ್ಕೇ ಮದುವೆ ಆಗುತ್ತೇವೆ (ಬೇರಾವ ಸಂಬಂಧಲ್ಲೂ ಕಾಮತೃಪ್ತಿಗೆ ಅವಕಾಶವಿಲ್ಲ!) ಮದುವೆಯಾದ ಸಂಗಾತಿಯೊಡನೆ ಕಾಮಕ್ರಿಯೆಯ ಅಪೇಕ್ಷೆಯೂ ಸಹಜ. ಆದರೆ ಸಂಗಾತಿಯೊಡನೆ ಅಗತ್ಯವಿರುವ ಹಾರ್ದಿಕ ಬಾಂಧವ್ಯವು ಮಾತ್ರ ಸಹಜವಾಗಿ ಬರುವುದಿಲ್ಲ! ಯಾಕೆ? ಅದಕ್ಕಾಗಿ ಸಂಗಾತಿಯನ್ನು 'ಬಯಸು'ವುದಕ್ಕೆ ಮನಸ್ಸು ಮಾಡಬೇಕಾಗುತ್ತದೆ. ಆದರೆ ಕಾಮದ ಬಯಕೆಯೇ ಬೇರೆ, ಸಂಗಾತಿಯ ಬಯಕೆಯೇ ಬೇರೆ. ಸಂಗಾತಿಯನ್ನು ಬಯಸಿದರೂ ಕಾಮವನ್ನು ಬಯಸದಿರಲು ಸಾಧ್ಯವಿದೆ (ನಾವಿಬ್ಬರೂ ಪ್ರೀತಿಸೋಣ, ಆದರೆ ಸೆಕ್ಸ್ ಬೇಡ"). ಆದುದರಿಂದ ಗಂಡಹೆಂಡತಿ ಎಂದಮಾತ್ರಕ್ಕೆ ಇಬ್ಬರ ನಡುವೆ ಕಾಮಕೂಟಕ್ಕೆ ಪೂರಕವಾದ ಬಾಂಧವ್ಯವು ಸಹಜವಾಗಿಯೇ ಹುಟ್ಟುತ್ತದೆ ಎನ್ನುವುದು ಸರಿಯಲ್ಲ. ಅದಕ್ಕಾಗಿ ಅನುಬಂಧವನ್ನು ಪ್ರತ್ಯೇಕವಾಗಿ ಕಟ್ಟಿಕೊಳ್ಳಬೇಕಾಗುತ್ತದೆ. ಈ 'ಕಾಮಬಾಂಧವ್ಯ'ದ ಕೊರತೆಯಿಂದ ವಿಕ್ರಮ ವಿಜಯಾ ದಾಂಪತ್ಯದಲ್ಲಿ ಸಮಸ್ಯೆ ಹುಟ್ಟಿದೆ.

ಈ ವಾದಕ್ಕೆ ಒಪ್ಪದೆ, ದಾಂಪತ್ಯದಲ್ಲಿ ಕಾಮಾಪೇಕ್ಷೆಯು ಸಹಜವಾಗಿಯೇ ಹುಟ್ಟುತ್ತದೆ ಎಂದುಕೊಂಡರೆ ಕೆಲವು ಸಮಸ್ಯೆಗಳಿಗೆ ಹುಟ್ಟುಹಾಕುತ್ತದೆ. ಒಂದು: ಸಂಗಾತಿಗೆ ಕೂಟಕ್ಕೆ ಮನಸ್ಸಿದ್ದು ನಿಮಗೆ ಇಲ್ಲದಿರುವಾಗ ಅವರ ದೇಹದ ಹಸಿವನ್ನು ತೀರಿಸಲು ನೀವು ಒಳಗೊಳ್ಳುವುದು "ಸಂಭೋಗ" ಮಾತ್ರವಾಗಿ ನಿಮಗೆ ಹಿಂಸೆಯಾಗುತ್ತದೆ – ಸಂಗಾತಿ ಕೇಳಿದರೆಂದು ಅವರ ಬೆನ್ನು ತುರಿಸುವಾಗ ನಿಮ್ಮ ಬೆನ್ನನ್ನೂ ತುರಿಸಿಕೊಂಡಂತೆ! ಎರಡು: ಇದು ಪ್ರಕೃತಿಸಹಜ ಎಂದುಕೊಂಡರೆ, ಸಹಜವಾಗಿ ಇರಬೇಕಾದುದು ನನ್ನಲ್ಲಿಲ್ಲ, ಹಾಗಾಗಿ ನನ್ನಲ್ಲಿ ದೋಷವಿದೆ ಎಂದು ವೈಯಕ್ತಿಕ ಹೊಣೆ ಹೊತ್ತುಕೊಳ್ಳುವ ಹಾಗಾಗಿ ಕೀಳರಿಮೆ ಕಾಡುತ್ತದೆ. ಇದು ಪರಸ್ಪರ ಕೊಡುತೆಗೆದುಕೊಳ್ಳುವ ಸ್ವಾರಸ್ಯವನ್ನು ಕಿತ್ತುಹಾಕಿ ಕೂಟವನ್ನು ಯಾಂತ್ರಿಕ ಕ್ರಿಯೆಯನ್ನಾಗಿ ಪರಿವರ್ತಿಸುತ್ತದೆ – ಇದೇ ಕಾರಣದಿಂದ ಅನೇಕ ಗಂಡಸರು ಶಿಶ್ನದೌರ್ಬಲ್ಯವನ್ನೂ ಹೆಂಗಸರು ಯೋನಿಸೆಡೆತವನ್ನೂ ಅನುಭವಿಸುತ್ತಾರೆ. ಮೂರು: ಕಾಮಾಪೇಕ್ಷೆ ಸಹಜ ಎಂದರೆ ಕಾಮವು ಹೆಚ್ಚಿದ್ದಷ್ಟೂ ಸಹಜತೆ ಹೆಚ್ಚು ಎಂದಾಗುತ್ತದೆ. ಹಾಗೆಯೇ, ಕಾಮಾಪೇಕ್ಷೆ ಕಡಿಮೆ ಎಂದಾಗ ವ್ಯಕ್ತಿಯಲ್ಲೇನೋ ತಪ್ಪಿದೆ ಎಂದಾಗುತ್ತದೆ.

ಬದ್ಧಸಂಬಂಧ ಕಾಮಾಪೇಕ್ಷೆಯ ಬಗ್ಗೆ ಡೇವಿಡ್ ಸ್ನಾರ್ಷ್ ಹೇಳುವುದಿಷ್ಟು:

★ ಹಾರ್ಮೋನುಗಳಂಥ ರಾಸಾಯನಿಕಗಳಿಂದ ಪ್ರಚೋದಿತವಾಗುವ ಕಾಮಾಪೇಕ್ಷೆಯು ಹುಟ್ಟುಪ್ರವೃತ್ತಿ. ಆದರೆ ಕಾಮಸುಖವನ್ನು ಒಂದು ನಿರ್ದಿಷ್ಟ ಸಂಗಾತಿಯೊಡನೆ ಹಂಚಿಕೊಂಡು ತೃಪ್ತಿ ಹೊಂದಬೇಕಾದರೆ 'ಕಾಮಬಾಂಧವ್ಯ' ಎನ್ನುವುದನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಅದಕ್ಕೆ ಇಬ್ಬರ ಪ್ರಯತ್ನವೂ ಬೇಕು.

★ ಒಬ್ಬರಲ್ಲಿ ಕಾಮಾಸಕ್ತಿ ಕಡಿಮೆ ಆಗುವಾಗ ಇನ್ನೊಬ್ಬರಲ್ಲೂ ನಿರಾಶೆ ಹುಟ್ಟಿ ಅವರ ಕಾಮಾಸಕ್ತಿಯನ್ನೂ ಕುಂದಿಸುತ್ತದೆ. ಹಾಗಾಗಿ ಕಾಮನಿರಾಸಕ್ತಿಯು ವೈಯಕ್ತಿಕವಾಗಿರದೆ ದಾಂಪತ್ಯದ ವ್ಯವಸ್ಥೆಗೆ ಸಂಬಂಧಪಟ್ಟಿದೆ. ಕಾಮಾಪೇಕ್ಷೆ ಹುಟ್ಟುಗುಣವಾಗದೆ ಬೆಳೆಸಿಕೊಂಡು ಬಂದ ಬಾಂಧವ್ಯದ ಗುರುತಾಗುತ್ತದೆ.

★ ಕಡಿಮೆ ಕಾಮಾಸಕ್ತಿ ಇರುವ ಸಂಗಾತಿಗೆ ಹೋಲಿಸಿಕೊಂಡು ಇನ್ನೊಬ್ಬರು ತಾವು 'ಪರಿಣಿತರು' ಎಂದುಕೊಳ್ಳುತ್ತಾರೆ. ಬದಲಾಗುವಂತೆ ಸಂಗಾತಿಗೆ ಒತ್ತಾಯ ತರುತ್ತಾರೆ. ಆಗ ಕಡಿಮೆ ಕಾಮಾಪೇಕ್ಷೆ ಇರುವವರು ತಮ್ಮಲ್ಲೇನೋ ದೋಷವಿದೆ ಎಂದುಕೊಂಡು ಖಿನ್ನರಾಗುತ್ತಾರೆ. ನನ್ನನ್ನು ಹೀಗೆಯೇ ಒಪ್ಪಿಕೋ ಎಂದು ಅಪೇಕ್ಷಿತರಿಗೆ ಒತ್ತಡ ಹೇರುತ್ತಾರೆ.

★ ವಿಪರ್ಯಾಸವೆಂದರೆ, ಹೆಚ್ಚು ಕಾಮಾಸಕ್ತಿ ಇರುವವರೂ (ಸಂಗಾತಿಯು ತಮ್ಮನ್ನು ಬಯಸದೆ ಇರುವುದರಿಂದ) ತಮ್ಮಲ್ಲೇನೋ ದೋಷವಿದೆ ಎಂದು ನಂಬುತ್ತಾರೆ. ತಾನು ಸಾಕಷ್ಟು ಆಕರ್ಷಕ ಆಗಿದ್ದರೆ ಬೇಡ ಎನ್ನಿಸಿಕೊಳ್ಳುವ ಪ್ರಸಂಗ ಬರುತ್ತಿರಲಿಲ್ಲ ಎಂದು ತಮ್ಮ ಬಗೆಗೆ ಕೀಳರಿಮೆ ಅನುಭವಿಸುತ್ತಾರೆ.

★ ಬದ್ಧ ಸಂಗಾತಿಗಳಲ್ಲಿ ಕಾಮಾಪೇಕ್ಷೆಯು ಹಾರ್ಮೋನುಗಳನ್ನು ಅವಲಂಬಿಸದೆ ಬಾಂಧವ್ಯವನ್ನು ಅವಲಂಬಿಸಿರುತ್ತದೆ. ಕಾಮಾಪೇಕ್ಷೆಗೆ ಏಟುಬಿದ್ದಾಗ ಬಾಂಧವ್ಯವು ಏರುಪೇರಾಗುತ್ತದೆ, ಹಾಗೂ ಬಾಂಧವ್ಯವು ಏರುಪೇರಾದಾಗ ಕಾಮಾಸಕ್ತಿಗೆ ಏಟುಬೀಳುತ್ತದೆ.

ಇದರರ್ಥ ಏನು? ಯಾವುದೊಂದು ದಾಂಪತ್ಯದಲ್ಲಿ ಕಾಮಾಸಕ್ತಿಯು ಅವರಿಗೆ ಹೆಚ್ಚಿಗಿದೆ, ಇವರಿಗೆ ಕಡಿಮೆಯಿದೆ ಎಂದು ಲೆಕ್ಕ ಮಾಡುವುದರ ಬದಲು ಇವರ ಬಾಂಧವ್ಯದಲ್ಲಿ ಕಾಮಾಪೇಕ್ಷೆಯು ಏರುಪೇರಾಗಿದೆ ಎಂದು ನಿರ್ಣಯಿಸುವುದು ಸಮಂಜಸ! ಉಚಿತ ಸಹಾಯವಾಣಿಗೆ ಸಂಪರ್ಕಿಸಿ: 8494944888.